KACM030027502016

C.C. 1283/2016 P.W-2

<u>ದಿನಾಂಕ ಃ **29.11.2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರಿದ ಪಾಟೀ ಸವಾಲು ಃ ಆರೋಪಿ ಪರ ಶ್ರೀ ವಕೀಲರಿಂದ ಃ</u>

ಪಾರ್ವತಮ್ಮನವರ ಗಂಡನ ಹೆಸರು ನಾಗರಾಜು. ಸಾಕ್ಷಿ ಮುಂದುವರಿದು, ಇಬ್ಬರೂ ಮೃತಪಟ್ಟಿರುತ್ತಾರೆ. ನಾಗರಾಜು ನನ್ನ ಗಂಡನ ಸ್ವಂತ ಸಹೋದರ ಎಂದರೆ ಸರಿ. ಪಾರ್ವತಮ್ಮ ಮಾರ್ಚ್ 2024 ರಲ್ಲಿ ಮೃತಪಟ್ಟಿದ್ದು, ನಾಗರಾಜು ಸುಮಾರು 10 ವರ್ಷಗಳ ಹಿಂದೆಯೇ ಮೃತಪಟ್ಟಿರುತ್ತಾರೆ. ನನ್ನ ಗಂಡನಿಗೆ ಆರೋಪಿಯ ಗಂಡ ಪರಿಚಯ ಇರುತ್ತಾರಾ ಎಂದರೆ ಸಂಬಂಧಿಯಾದ ಕಾರಣ ಪರಿಚಯ ಇರುತ್ತಾರೆ. ವೀರಭದ್ರೇಶ್ವರ ಹಾರ್ಡ್‌ವೇರ್ ಗೆ ನನ್ನ ಗಂಡ ಹೋಗಿರುತ್ತಾರಾ ಎಂದರೆ ಗೊತ್ತಿಲ್ಲ. ನಾನು ವೀರಭದ್ರೇಶ್ವರ ಹಾರ್ಡ್‌ವೇರ್ ಗೆ ಹೋಗಿರುತ್ತೇನೆ. ಸದರಿ ವೀರಭದ್ರೇಶ್ವರ ಹಾರ್ಡ್‌ವೇರ್ ಯಾರನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಆರೋಪಿಯೇ ನೋಡಿಕೊಳ್ಳುತ್ತಿದ್ದರು. ಆರೋಪಿಯ ಗಂಡನ ಹೆಸರು ಸುರೇಶ. ನನ್ನ ತಂದೆಗೆ ನಿಪಿ-1 ಚೆಕ್ಕನ್ನು 10-12 ವರ್ಷಗಳ ಮುಂಚಿತವಾಗಿ ಆರೋಪಿ ಪರಿಚಯವಾಗಿರುತ್ತಾರೆ. ಆರೋಪಿ ವ್ಯಾಪಾರ ಮಾಡುತ್ತಿದ್ದ ಬಗ್ಗೆ ದಾಖಲೆಯನ್ನು ನೀಡಿರುತ್ತೇನೆ,

ಈ ಪ್ರಕರಣ ದಾಖಲಿಸುವ ಮುಂಚಿತವಾಗಿ ಆರೋಪಿಯ ಮನೆಗೆ ಹೋಗಿದ್ದು, ದಿನಾಂಕ ನೆನಪಿಲ್ಲ. ಪ್ರಕರಣ ದಾಖಲಿಸುವ ಎಷ್ಟು ದಿನ ಮುಂಚಿತವಾಗಿ ಆರೋಪಿಯ ಮನೆಗೆ ಹೋಗಿದ್ದೆ ಎಂದು ಗೊತ್ತಿಲ್ಲ. ನೋಟೀಸು ಕೊಡುವ ಪೂರ್ವದಲ್ಲಿ ನಾವು ಆರೋಪಿಯ ಮನೆಗೆ ಹೋಗಿಲ್ಲ. ಆರೋಪಿ ಪಾರ್ವತಮ್ಮನವರಿಗೆ ಹೇಗೆ ಸಂಬಂಧ ಎಂದರೆ ದೂರದ ಸಂಬಂಧಿಯಾರಿರುತ್ತಾರೆ. ನನ್ನ ತಂದೆ ನೋಟೀಸು ಕೊಡುವ ಪೂರ್ವದಲ್ಲಿ ಆರೋಪಿಯ ಮನೆಗೆ ಹೋಗಿಲ್ಲ. ಆರೋಪಿಯ ಮೊಬೈಲ್ ನಂಬರ್ ಗೊತ್ತಿಲ್ಲ. ಬ್ಯಾಂಕಿನವರು ಸಹಿ ಪೂರ್ಣವಾಗಿಲ್ಲ ಮತ್ತು ಬೇರೆ ಕಾರಣ ಸಾಕಷ್ಟು ಹಣ ಇಲ್ಲವೆಂದು ಹಿಂಬರಹ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ದಿಃ01.05.2016 ರಂದು ನೋಟೀಸು ನೀಡಿರುತ್ತಾರೆ. ಸದರಿ ನೋಟೀಸಿನಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಿಪಿ-1 ರ ಮೇಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ. ನನ್ನ ತಂದೆಗೆ ರೂ.3 ಲಕ್ಷ ಹಣ ನೀಡುವಷ್ಟು ಆರ್ಥಿಕ ಶಕ್ತಿ ಇರಲಿಲ್ಲ ಎಂದರೆ ಸರಿಯಲ್ಲ. ದಿಃ25.04.2016 ರಂದು ನನ್ನ ತಂದೆ ನಿಪಿ-1 ಚೆಕ್ಕನ್ನು

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-4.pdf

ನಗದೀಕರಣಕ್ಕೆ ಸಲ್ಲಿಸಿರುತ್ತಾರೆ. ನನ್ನ ತಂದೆ ಆರೋಪಿಯ ಅಂಗಡಿ ಹೋಗಿದ್ದಾಗ ಖಾಲಿ ಚೆಕ್ಕನ್ನು ತೆಗೆದುಕೊಂಡು ಬಂದು ಸಹಿಯನ್ನು ಯಾರ ಬಳಿಯೋ ಮಾಡಿಸಿ, ನನ್ನ ತಂದೆಯ ಮೂಲಕ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಕುಟುಂಬಕ್ಕೂ, ನನ್ನ ತಂದೆಗೂ ಪರಿಚಯ ಇಲ್ಲ ಎಂದರೆ ಸರಿಯಲ್ಲ.

ಆರೋಪಿ ನಮ್ಮ ಮನೆಗೆ ಕಾರಿನ ಚಾಲಕ ಜೊತೆ ಬಂದಿಲ್ಲ ಎಂದರೆ ಸರಿಯಲ್ಲ. ಕಾರಿನ ಚಾಲಕನ ಮೂಲಕ ಆರೋಪಿ ಚೆಕ್ಕನ್ನು ಬರೆಸಿ, ನೀಡಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯನ್ನು ಆರೋಪಿ ನೋಡಿಲ್ಲ ಎಂದರೆ ಸರಿಯಲ್ಲ. ನಿಪಿ-3 ನೋಟೀಸಿನಲ್ಲಿ ನನ್ನ ತಂದೆ ಆರೋಪಿ ಮನೆಗೆ ಬಂದು ಕಾರಿನ ಚಾಲಕನ ಮೂಲಕ ಚೆಕ್ಕು ಬರೆಸಿ, ನೀಡಿದ್ದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ಸದರಿ ವಿಷಯವನ್ನು ನಾನು ಸೃಷ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸು ತಲುಪಿದ ನಂತರ ದಾವಣಗೆರೆಯ ನನ್ನ ಮನೆಯಲ್ಲಿ ಪಂಚಾಯತಿ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಸವಯದಲ್ಲಿ ಆರೋಪಿ ಮತ್ತು ಆರೋಪಿಯ ಸಂಬಂಧಿಕರು ಹಾಗೂ ಪಾರ್ವತಮ್ಮ ನವರು ಬಂದಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ತಪ್ಪಾಗಿ ನೋಟೀಸು ಕಳುಹಿಸಿದ್ದು, ಯಾವುದೇ ಪ್ರಕರಣ ದಾಖಲಿಸುವುದಿಲ್ಲ ಎಂದು ಹೇಳಿರುತ್ತೇವೆ ಎಂದರೆ ಆರೋಪಿ ನಮ್ಮ ಮನೆಗೆ ಬಂದಿರುವುದಿಲ್ಲ. ನಂತರದಲ್ಲಿ ಆರೋಪಿಯ ಗಂಡನಿಗೆ ಅನಾರೋಗ್ಯದಿಂದಾಗಿ ಆಸ್ಪತ್ರೆಗೆ ಸೇರಿದ್ದರು ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಪ್ರಕರಣ ದಾಖಲಿಸುವುದಿಲ್ಲ ಎಂದು ಹೇಳಿದ ನಂಬಿಕೆಯಿಂದ ನಮ್ಮ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳದೇ ಸುಮ್ಮನೆ ಇದ್ದರು ಎಂದರೆ ಸರಿಯಲ್ಲ. ಪ್ರಕರಣದ ಸಮನ್ಸ್ ಬಂದ ನಂತರ ಪ್ರಕರಣದ ಬಗ್ಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನನ್ನ ತಂದೆ ಮೃತಪಡುವ ಸಮಯದಲ್ಲಿ 72 ವರ್ಷ ವಯಸ್ಸಾಗಿತ್ತು. ಆರೋಪಿಯ ಗಂಡ ಈಗಲೂ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಯಾವುದೇ ಹಣಕಾಸಿನ ವ್ಯವಹಾರ ಆಗದೇ ಇದ್ದರೂ ನನ್ನ ಗಂಡ ಆರೋಪಿಯ ಗಿರಾಣಿ ಅಂಗಡಿಯಿಂದ ನಿಪಿ-1 ಚೆಕ್ಕನ್ನು ತೆಗೆದುಕೊಂಡು ಬಂದು, ನನ್ನ ತಂದೆಯ ಮೂಲಕ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-4.pdf

www.ecourtsindia.com

KACM030027502016

C.C. 1283/2016 P.W-2

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸ ಇ ಎ,

sd/-
(ಶ್ರೀ ಹರೀಶ್.ಜಿ)
2 ನೇ ಹೆಚ್ಚು ವರಿ ಸಿವಿಲ್ ನ್ಯಾಯಾಧೀಶರು,
ಪ್ರ ದ ನ್ಯಾದಂ ., ಚಿಕ್ಕಮಗಳೂರು

This is a True Copy of the Court Records Online. Authenticated @ districts.ecourtsindia.com/cnr/KACM030027502016/truecopy/order-4.pdf

www.ecourtsindia.com